# Karnataka Examinations Authority

18th Cross, Sampige Road, Malleshwaram, Bangalore – 560 012.


**ಸಂಖ್ಯೆ :** ED/KEA/ADM/CR-27/2018 Date:-06-08-2018

## ಅಧಿಸೂಚನೆ

1) 2018–19ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೊಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸಿನ ಆಯ್ಕೆಗಾಗಿ ಸರ್ಕಾರಿ ಶುಶ್ರೂಷಾ ಶಾಲೆ ಹಾಗೂ ಖಾಸಗಿ ಶುಶ್ರೂಷಾ ಶಾಲೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ದ್ವಿತೀಯ ಪಿ.ಯು.ಸಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ದಿನಾಂಕ: 07–08–2018 ರಿಂದ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದು.
ಅ) **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23–08–2018**

2) ***ವೆಬ್‌ಸೈಟ್ ವಿಳಾಸ*** http://kea.kar.nic.in
ಅರ್ಜಿ ಶುಲ್ಕ ರೂ. 500/– (ಪಜಾ / ಪಪಂ, ವರ್ಗ–1 ಕ್ಕೆ ರೂ. 150/–) ಗಳನ್ನು ನಿಗದಿಗೊಳಿಸಿದ್ದು, ಶುಲ್ಕವನ್ನು **ಕಾರ್ಯನಿರ್ವಾಹಕ ನಿರ್ದೇಶಕರು,** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರ ಹೆಸರಿನಲ್ಲಿ ಚಲನ್ ಮೂಲಕ ಭರಿಸತಕ್ಕದ್ದು.

3) ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ವೆಬ್‌ಸೈಟ್ ಅನ್ನು ಗಮನಿಸುತ್ತಿರಬೇಕು. ಡಿಪ್ಲೊಮ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್‌ಗೆ ಆಯ್ಕೆ ಮಾಡುವ ಸಲುವಾಗಿ ಕೌನ್ಸಿಲಿಂಗ್‌ಗೆ ಸ್ಥಳ ಮತ್ತು ದಿನಾಂಕವನ್ನು http://kea.kar.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಅಭ್ಯರ್ಥಿಗಳು ಅವರವರ ಸ್ವಂತ ರಜೆ ಮತ್ತು ಖರ್ಚಿನಲ್ಲಿ ಹಾಜರಾಗತಕ್ಕದ್ದು.

4) **ವಿದ್ಯಾರ್ಹತೆ:** ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 44 ಎಂಪಿಎಸ್ 2003(3), ದಿನಾಂಕ: 03–07–2003 ಹಾಗೂ ಭಾರತೀಯ ಶುಶ್ರೂಷಾ ಪರಿಷತ್ತಿನ ಪರಿಷ್ಕೃತ ಪ್ರವೇಶ ಅರ್ಹತೆಯ ಪ್ರಕಾರ ಈ ಕೆಳಕಂಡ ವಿದ್ಯಾರ್ಹತೆ ಹೊಂದಿರಬೇಕು.

a) 10+2 with 40% marks from any recognized board. However science is Preferable. (ಅಂದರೆ ದ್ವಿತೀಯ ಪಿ.ಯು.ಸಿ ಯಲ್ಲಿ ವಿಜ್ಞಾನ ಮತ್ತು ಇತರೆ ವಿಭಾಗದ ಅಭ್ಯರ್ಥಿಗಳು ಸಮ ಅಂಕಗಳನ್ನು ಗಳಿಸಿದಂತ ಸಂದರ್ಭದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು)

b) 5% is relaxed for SC/ST candidates.

c) Candidates are also eligible from State Open School recognized by State Government and National Institute of Open School (NIOS) recognized by Central Government.

d) ಭಾರತೀಯ ಶುಶ್ರೂಷಾ ಪರಿಷತ್ತಿನ ಪತ್ರಸಂಖ್ಯೆ: 18–15/ಎಸ್‌ಎನ್‌ಆರ್‌ಸಿ/2013–ಐಎನ್‌ಸಿ, ದಿನಾಂಕ: 10–09–2015ರ ಪ್ರಕಾರ **ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ ಯಲ್ಲಿ ಕಡ್ಡಾಯವಾಗಿ ಇಂಗ್ಲೀಷ್ ವಿಷಯವನ್ನು ವ್ಯಾಸಾಂಗ ಮಾಡಿರಬೇಕು.**

e) ಭಾರತೀಯ ಶುಶ್ರೂಷಾ ಪರಿಷತ್ತಿನ ಪ್ರವೇಶಾತಿಯ ಮಾರ್ಗಸೂಚಿಯನ್ವಯ ಪ್ರಸಕ್ತ ವರ್ಷದ ಡಿಸೆಂಬರ್ 31ಕ್ಕೆ ಅಭ್ಯರ್ಥಿಯ ವಯಸ್ಸು 17 ವರ್ಷ ತುಂಬಿರಬೇಕು. 35ವರ್ಷಗಳು ಮೀರಿರಬಾರದು. ಇಲಾಖಾ ಅಭ್ಯರ್ಥಿಗಳಿಗೆ 48 ವರ್ಷ ಮೀರಿರಬಾರದು.

2. . . .

f) ಅಭ್ಯರ್ಥಿಗಳು 1ನೇ ತರಗತಿಯಿಂದ 12ನೇ (ದ್ವಿತೀಯ ಪಿ.ಯು.ಸಿ) ತರಗತಿಯವರೆಗೆ ಕನಿಷ್ಠ 7ವರ್ಷಗಳು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರಬೇಕು.

**ಅಥವಾ**

g) ಅಭ್ಯರ್ಥಿಗಳು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಅಥವಾ ಅದಕ್ಕೆ ತತ್ಸಮಾನವಾದ ವ್ಯಾಸಂಗವನ್ನು ಮಾಡಿರಬೇಕು ಹಾಗೂ ಅಭ್ಯರ್ಥಿಯ ಪೋಷಕರಲ್ಲಿ ಒಬ್ಬರು ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 7 ವರ್ಷಗಳು ವ್ಯಾಸಂಗ ಮಾಡಿರಬೇಕು. (ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ ನೀಡತ್ತಕ್ಕದ್ದು).

h) ಶುಶ್ರೂಷಾ ತರಬೇತಿಗೆ ಹೊರನಾಡು / ಗಡಿನಾಡು ಕನ್ನಡಿಗರು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕನ್ನಡ ಓದಲು ಬರೆಯಲು ಬರಬೇಕು. ತರಬೇತಿ ಆಯ್ಕೆಗೆ ಮುನ್ನ ಕನ್ನಡ ಪರೀಕ್ಷೆ ನಡೆಸಲಾಗುವುದು. ಅದರಲ್ಲಿ ಉತ್ತೀರ್ಣರಾದಲ್ಲಿ ಮಾತ್ರ ಆಯ್ಕೆಗೆ ಅರ್ಹರಾಗಿರುತ್ತಾರೆ.

i) ತರಬೇತಿಗೆ ಗರ್ಭಿಣಿ ಅಭ್ಯರ್ಥಿಗಳಿಗೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲ.

j) ವಿವಾಹಿತ ಮಹಿಳಾ ಅಭ್ಯರ್ಥಿಗಳು ಪತಿಯ ಆದಾಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸತಕ್ಕದ್ದು.

5. ಅಂಗವಿಕಲ ಕೋಟಾದಡಿಯಲ್ಲಿ ಆಯ್ಕೆಬಯಸುವ ಅಭ್ಯರ್ಥಿಗಳು ದೇಹದ ಕೆಳಭಾಗದಲ್ಲಿ (ಕಾಲು) ಶೇ. 40 ರಿಂದ 50ರ ಒಳಗೆ ಅಂಗವಿಕಲತೆ ಹೊಂದಿರುವವರು ಮಾತ್ರ ಶುಶ್ರೂಷಾ ತರಬೇತಿಗೆ ಅರ್ಹರಾಗಿರುತ್ತಾರೆ. ಈ ಕೋಟಾದಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ದೃಢೀಕರಣ ಪತ್ರವನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

6. **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ ವ್ಯಾಸಾಂಗ ಮಾಡಿದ ಅಭ್ಯರ್ಥಿಗಳು ಶುಶ್ರೂಷಾ ತರಬೇತಿ ಆಯ್ಕೆಗೆ ಅರ್ಹರಿರುವುದಿಲ್ಲ.**

7. **ತರಬೇತಿಯ ಅವಧಿ:–** ಶುಶ್ರೂಷಾ ತರಬೇತಿ ಅವಧಿಯು ಮೂರು ವರ್ಷಗಳಾಗಿದ್ದು, ಸರ್ಕಾರಿ ನಿಯಮಗಳ ಪ್ರಕಾರ, ಸರ್ಕಾರಿ ಶುಶ್ರೂಷಾ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಮಾತ್ರ ಶಿಷ್ಯವೇತನ ಪಡೆಯಲು ಅರ್ಹರಾಗಿರುತ್ತಾರೆ.

8. **ಹೈದ್ರಾಬಾದ್–ಕರ್ನಾಟಕ ವಿಭಾಗೀಯ ಮೀಸಲಾತಿ:**

a) ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 184 ಆರ್.ಜಿ.ಯು 2014, ದಿನಾಂಕ:30–05–2014ರ ಪ್ರಕಾರ ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯದ ಶಿಕ್ಷಣಾರ್ಥಿಗಳಿಗೆ ರಾಜ್ಯವ್ಯಾಪ್ತಿ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 8%ರಷ್ಟು ಹಾಗೂ ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯದ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 70%ರಷ್ಟು ಸೀಟುಗಳನ್ನು ಹೈದ್ರಾಬಾದ್–ಕರ್ನಾಟಕ ಭಾಗದ ಶಿಕ್ಷಣಾರ್ಥಿಗಳಿಗೆ ಮೀಸಲಿಡಲಾಗುವುದು. (ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೀದರ್, ಯಾದಗಿರಿ)

b) ಹೈದ್ರಾಬಾದ್–ಕರ್ನಾಟಕ ಮೀಸಲು ಕೋಟಾದಲ್ಲಿ ಆಯ್ಕೆ ಬಯಸಿದ್ದಲ್ಲಿ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ವಾಸವಿರುವ ದೃಢಿಕರಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು. ಮೂಲ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

9. **ಇತರೆ ಮೀಸಲಾತಿ:–**

a) ಸರ್ಕಾರಿ ಶುಶ್ರೂಷಾ ಶಾಲೆಯಲ್ಲಿರುವ ಒಟ್ಟು ತರಬೇತಿ ಸ್ಥಾನಗಳ ಪೈಕಿ ಶೇಕಡಾ 5ರಷ್ಟು ಸೀಟುಗಳನ್ನು ಪುರುಷ ಅಭ್ಯರ್ಥಿಗಳಿಗೆ ಆಯಾ ವರ್ಗಕ್ಕೆ ಅನುಸಾರವಾಗಿ ಮೀಸಲಿರಿಸಲಾಗುವುದು.

b) ಮಾಜಿ ಸೈನಿಕರ ಮಕ್ಕಳಿಗೆ ಶೇಕಡ 1ರಷ್ಟು ಸೀಟುಗಳನ್ನು ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ಮೀಸಲಿರಿಸಲಾಗಿದ್ದು, ತಂದೆ ಮಾಜಿ ಸೈನಿಕರು ಎಂಬುದರ ಪ್ರಮಾಣ ಪತ್ರವನ್ನು ಮೂಲ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

. . . . .3

c) ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಎಂಪಿಎಸ್ 2010, ದಿನಾಂಕ: 04-02-2011ರಂತೆ ಸರ್ಕಾರಿ ನರ್ಸಿಂಗ್ ಶಾಲೆಯಲ್ಲಿರುವ ಒಟ್ಟು ಸೀಟುಗಳ ಪೈಕಿ ಶೇಕಡಾ 2ರಷ್ಟು ಸಿಟುಗಳನ್ನು ಆಂಗ್ಲೋ ಇಂಡಿಯನ್ ಸಮುದಾಯದ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗುವುದು. ಈ ಸ್ಥಾನದಲ್ಲಿ ಆಯ್ಕೆ ಬಯಸುವವರು **ಕಂಡಿಕೆ (4)**ರಲ್ಲಿನ ಷರತ್ತುಗಳನ್ನು ಪೂರೈಸಬೇಕು ಮತ್ತು ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸೇರಿರುವ ಬಗ್ಗೆ ಮೂಲದೃಢೀಕರಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

**10.** **ಸೇವಾನಿರತ ನೌಕರರ ಮೀಸಲು ಸೀಟುಗಳು:-**

a) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಶೇಕಡಾ 5%ರಷ್ಟು ಸೀಟುಗಳನ್ನು ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ಮೀಸಲಿರಿಸಲಾಗುವುದು. ಸೇವಾನಿರತ ಅಭ್ಯರ್ಥಿಗಳು ಈ ಕೆಳಕಂಡ ವಿದ್ಯಾರ್ಹತೆ ಹೊಂದಿರಬೇಕು.
b) 10+2 with 40% marks from any recognized board. However science is Preferable.
c) Registered ANM.
d) Candidates are also eligible from State Open School recognized by State Government and National Institute of Open School (NIOS) recognized by Central Government.

**11.** ಸೇವಾನಿರತ ನೌಕರರು ಹಿಂದಿನ ಹುದ್ದೆಗೆ ಬಾಂಡ್ ಅವಧಿ ಮುಗಿದು 5 ವರ್ಷಕ್ಕೆ ಕಡಿಮೆಯಿಲ್ಲದೇ ಸರ್ಕಾರಿ ಸೇವೆ ಸಲ್ಲಿಸಿರಬೇಕು ಮತ್ತು ಖಾಯಂಪೂರ್ವಾ ಸೇವಾವಧಿ ಘೋಷಣೆಯಾಗಿರಬೇಕು. ಹಾಗೂ ಇಲಾಖಾ ವಿಚಾರಣೆ ಬಾಕಿ ಇಲ್ಲದಂತಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿ**ಕಂಡಿಕೆ (4) ರಲ್ಲಿನ ದಾಖಲಾತಿಗಳನ್ನು ಹಾಗೂ ನೇಮಕಾತಿ ಆದೇಶದ ಪ್ರತಿ ಮತ್ತು ಖಾಯಂ ಪೂರ್ವ ಸೇವಾವಧಿ ಘೋಷಣೆ ಪ್ರತಿ, ಇಲಾಖಾ ವಿಚಾರಣೆ ಬಾಕಿ ಇಲ್ಲವೆಂದು ನೇಮಕಾತಿ ಪ್ರಾಧಿಕಾರದಿಂದ ದೃಢೀಕರಣ ಪತ್ರ ಪಡೆದು, ಅದರ ಪ್ರತಿಯನ್ನು ನಿಗದಿಪಡಿಸಿರುವ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ, ತಮ್ಮ ನೇಮಕಾತಿ ಪ್ರಾಧಿಕಾರದ ಮುಖಾಂತರ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ದಿನಾಂಕ: 27/08/2018 ರೊಳಗೆ ಸಲ್ಲಿಸತಕ್ಕದ್ದು.**

**12.** ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರದ ನರ್ಸಿಂಗ್ ಶಾಲೆಗಳಲ್ಲಿ ಆಯಾ ವರ್ಗಕ್ಕೆ ತಕ್ಕಂತೆ ಎಲ್ಲಾ ಪ್ರವರ್ಗಕ್ಕೆ ಸರ್ಕಾರಿ ಆದೇಶಾನುಸಾರ ಸೀಟುಗಳನ್ನು ಮೀಸಲಿಡಲಾಗುವುದು.

**13.** ಶುಶ್ರೂಷಾ ತರಬೇತಿಗೆ ಆಯ್ಕೆಯಾಗಿ ತರಬೇತಿ ಪೂರ್ಣಗೊಳಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಸರ್ಕಾರದಲ್ಲಿ ಸೇವೆ ಸಲ್ಲಿಸಲು ನೇಮಕ ಮಾಡಿಕೊಳ್ಳುವ ಖಾತರಿ ನೀಡುವುದಿಲ್ಲ. ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ತರಬೇತಿ ಅವಧಿಯಲ್ಲಿ ಶಿಷ್ಯವೇತನವನ್ನು ಪಡೆಯುವುದರಿಂದ, ಇಬ್ಬರು ಖಾಯಂ ರಾಜ್ಯ ಸರ್ಕಾರಿ ನೌಕರರ ಜಾಮೀನಿನಿಂದ ಕೂಡಿದ ಬಂಧಪತ್ರವನ್ನು ಪ್ರವೇಶ ಸಮಯದಲ್ಲಿ ಸಲ್ಲಿಸಬೇಕು.

**14.** ಸರ್ಕಾರಿ ಕೋಟಾದಡಿ ಖಾಸಗಿ ನರ್ಸಿಂಗ್ ಶಾಲೆಗಳಿಗೆ ಆಯ್ಕೆಯಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ನಿಯಮಾನುಸಾರ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ಪಡೆಯಬಹುದಾಗಿರುತ್ತದೆ.

ಸಹಿ/-

**ಕಾರ್ಯನಿರ್ವಾಹಕ ನಿರ್ದೇಶಕರು**